# IN THE COURT OF THE ADDL. SENIOR CIVIL JUDGE & JMFC., GUBBI
# **OS – 112/2022**

Witness present and duly sworn on : 11.12.2023.

Cross Examination: by Counsel for plaintiff :

ಮರಿಗೌಡರವರಿಗೆ ಇಬ್ಬರು ಮಕ್ಕಳು ಅವರುಗಳು ಸಿದ್ದೇಗೌಡ ಮತ್ತು ಬೆಟ್ಟೆಗೌಡ ಎಂದರೆ ಸರಿ. ಸಿದ್ದೇಗೌಡ ಮತ್ತು ಅವರ ಹೆಂಡತಿ ಹುಚ್ಚಮ್ಮರವರಿಗೆ 3 ಜನ ಮಕ್ಕಳು ಮತ್ತು ಅವರುಗಳು ಶಿವಲಿಂಗಮ್ಮ , ಕೆಂಪಮ್ಮ ಮತ್ತು ಕಾಳಮ್ಮ. ಬೆಟ್ಟೆಗೌಡ ಮತ್ತು ಅವರ ಹೆಂಡತಿ ಗಂಗಮ್ಮ ರವರಿಗೆ 4 ಜನ ಮಕ್ಕಳು. ಅವರುಗಳು ಗಂಗಬೋರಯ್ಯ, ಸಿಂಗಮ್ಮ, ಲಕ್ಷ್ಮಿದೇವಮ್ಮ ಮತ್ತು ಶಾರದಮ್ಮ. ನಾನು ಹಾಜರುಪಡಿಸಿರುವ ನಿಡಿ-2 ದಾನಪತ್ರವನ್ನು ನಾನು ನೋಡಿದ್ದೇನೆ. ಸದರಿ ದಾಖಲೆಯಲ್ಲಿ 2 ಎಕರೆ 24 ಗುಂಟೆ ಜಮೀನು ನಮೂದು ಮಾಡಿದ್ದಾರೆ ಎಂದರೆ ಕೈ ತಪ್ಪಿನಿಂದ ಆ ರೀತಿ ನಮೂದು ಆಗಿದ್ದು ಜಮೀನಿನ ವಿಸ್ತೀರ್ಣ 3 ಎಕರೆ 5 ಗುಂಟೆ ಇರುತ್ತದೆ. ಕೈ ತಪ್ಪಿನಿಂದ ಆ ರೀತಿ ನಮೂದು ಆಗಿರುವುದಿಲ್ಲ ಮತ್ತು ದಾನದಲ್ಲಿ ಕೊಟ್ಟಿರುವುದು 2 ಎಕರೆ 24 ಗುಂಟೆ ಜಮೀನು ಇದ್ದರು ನಾನು ಸೃಷ್ಟಿಸಿ ಅದು 3 ಎಕರೆ 5 ಗುಂಟೆ ಜಮೀನು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರ್ವೆ ನಂ.37 ರಲ್ಲಿ ಖರಾಬು ಸೇರಿ 6 ಎಕರೆ 9 ಗುಂಟೆ ಜಮೀನು ಎಂದರೆ ಸರಿ. ಈ ಮೊದಲು ಸದರಿ ಜಮೀನಿನಲ್ಲಿ 1 ಎಕರೆ 2 ಗುಂಟೆ ಕರಾಬು ಜಮೀನು ಎಂದರೆ ಸರಿಯಲ್ಲ. ಸದರಿ 1 ಎಕರೆ 2 ಗುಂಟೆ ಕರಾಬು ಜಮೀನು ತೆಗೆದು ಸಾಗುವಳಿಗೆ ಇದ್ದ ಜಮೀನಿನ ವಿಸ್ತೀರ್ಣ 5 ಎಕರೆ 7 ಗುಂಟೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಗುವಳಿಗೆ ಇದ್ದ ಜಮೀನಿನ ವಿಸ್ತೀರ್ಣ 5 ಎಕರೆ 29 ಗುಂಟೆ ಜಮೀನು. 1958 ರಲ್ಲಿ ಸರ್ವೆ ಮಾಡಿ ಕರಾಬು ಇದ್ದ ಜಮೀನನ್ನು ಸಾಗುವಳಿಗೆ re settlement ಮಾಡಿದ್ದಾಗ 1 ಎಕರೆ 2 ಗುಂಟೆ ಕರಾಬು ಜಮೀನಿನ ಪೈಕಿ 22 ಗುಂಟೆ ಸಾಗುವಳಿಗೆ ನೀಡಿ ಉಳಿದ 20 ಗುಂಟೆ ಜಮೀನನ್ನು ಕರಾಬಾಗಿ ಇಟ್ಟರು ಎಂದರೆ ಸರಿಯಲ್ಲ.

ಸಿದ್ದೆಗೌಡರು ಅವರು ಮೊದಲನೆ ಮಗಳಾದ ಶಿವಲಿಂಗಮ್ಮನವರಿಗೆ 1 ಎಕರೆ 12 ಗುಂಟೆ ಜಮೀನು ಮತ್ತು 3 ನೇ ಮಗಳಾದ ಕಾಳಮ್ಮನವರಿಗೆ 1 ಎಕರೆ 12 ಗುಂಟೆ ಜಮೀನನ್ನು ದಾನವಾಗಿ ನೀಡಿದ್ದರು ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆಂದರೆ ಸರಿ. ಶಿವಲಿಂಗಮ್ಮನವರ ಗಂಡ ಸಿದ್ದಪ್ಪ ನವರು ಶಿವಲಿಂಗಮ್ಮ ಮೊದಲನೆ ಹೆಂಡತಿ ಮತ್ತು ವಾದಿ ನಿಂಗಮ್ಮ 2 ನೇ ಹೆಂಡತಿ ಎಂದರೆ ಸರಿ. ಶಿವಲಿಂಗಮ್ಮ ತೀರಿಕೊಂಡ ನಂತರ ಶಿವಲಿಂಗಮ್ಮನವರಿಗೆ ದಾನವಾಗಿ ಬಂದ 1 ಎಕರೆ 12 ಗುಂಟೆ ಜಮೀನು ಸಿದ್ದಪ್ಪನವರಿಗೆ ಹೊಯಿತು ಎಂದರೆ ಸರಿ. ಕಾಳಮ್ಮನವರಿಗೆ ಬಂದ 1 ಎಕರೆ 12 ಗುಂಟೆ ಜಮೀನು, 1 ಎಕರೆ 5 ಗುಂಟೆ ಜಮೀನನ್ನು ಸದರಿ ಸಿದ್ದಪ್ಪನವರಿಗೆ ಕ್ರಯದ ಕರಾರು ಮೂಲಕ ನೀಡಿದ್ದು ಅವರು ಸದರಿ ಜಮೀನಿನಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಕಾಳಮ್ಮನವರು ಸಿದ್ದಪ್ಪನವರಿಗೆ 1 ಎಕರೆ 5 ಗುಂಟೆ ಜಮೀನಿನ ಸ್ವಾಧೀನಕ್ಕೆ ಧಕ್ಕೆ ಉಂಟು ಮಾಡಿದ ಕಾರಣ ಅವರು ಒಂದು ದಾವೆ OS 163/1986 ಗುಬ್ಬಿ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ಸುಳ್ಳು. ಸದರಿ ದಾವೆಯಲ್ಲಿ ನ್ಯಾಯಾಲಯವು ಸಿದ್ದಪ್ಪನವರ ಸ್ವಾಧೀನಕ್ಕೆ ಧಕ್ಕೆ ಉಂಟು ಮಾಡಬಾರದೆಂದು ಕಾಳಮ್ಮನವರ ವಿರುದ್ದ ನಿರ್ಬಂದ ಕಾಜ್ಞೆ ನೀಡಿದ್ದರು ಎಂದರೆ ಸುಳ್ಳು.

ಕಾಳಮ್ಮನವರು ಸಿದ್ದಪ್ಪನವರಿಗೆ 1 ಎಕರೆ 5 ಗುಂಟೆ ಜಮೀನಿನ ಕರಾರು ಪತ್ರ ಮಾಡಿಕೊಟ್ಟ ನಂತರ ಅವರ ಸ್ವಾಧೀನಕ್ಕೆ ಕೇವಲ 7 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಸದರಿ 7 ಗುಂಟೆ ಜಮೀನಿನಲ್ಲಿ ಮಾತ್ರ ನಾವು ಸ್ವಾಧೀನದಲ್ಲಿದ್ದೇವೆ ಮತ್ತು ಸಂಪೂರ್ಣ 1 ಎಕರೆ 12 ಗುಂಟೆ ಜಮೀನಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪನವರು ಅವರ ಹೆಂಡತಿಯ 1 ಎಕರೆ 12 ಗುಂಟೆ ಜಮೀನು ಮತ್ತು ಕಾಳಮ್ಮನವರಿಂದ ಪಡೆದ 1 ಎಕರೆ 5 ಗುಂಟೆ ಜಮೀನನ್ನು ಸೇರಿ ಮ್ಯೂಟೇಷನ್ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. ಸಿದ್ದಪ್ಪನವರು ತೀರಿಕೊಂಡ ನಂತರ ಸದರಿ ಎರಡು ಜಮೀನುಗಳನ್ನು ಈ ಕೇಸಿನ ವಾದಿ ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. 1 ಎಕರೆ 12 ಗುಂಟೆ ಜಮೀನಿನಗೆ ಲಗತ್ತಾಗಿದ್ದ ಕರಾಬು ನಲ್ಲಿ 13 ಗುಂಟೆ ಜಮೀನು ಸಿದ್ದಪ್ಪನವರ ಹೆಸರಿಗೆ ಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಲಗತ್ತಾಗಿರುವ 9 ಗುಂಟೆ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿದ್ದೇನೆಂದರೆ ಸುಳ್ಳು. ವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿರುವುದನ್ನು ಪ್ರಶ್ನಿಸಿ ನಾನು ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ

ಸಲ್ಲಿಸಿದ್ದೇನೆಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆದೇಶವನ್ನು ಡಿ.ಸಿ ಯವರ ಮುಂದೆ ಪ್ರಶ್ನಿಸಿದ್ದೇನೆಂದು ಹೇಳುತ್ತಾರೆ. ಡಿ.ಸಿಯವರು ನಾನು ಹಾಕಿರುವ ಅರ್ಜಿಯನ್ನು ವಜಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರಕರಣವು ಡಿ.ಸಿ ರವರ ಮುಂದೆ ಚಾಲ್ತಿಯಲ್ಲಿದೆ ಎಂದು ಹೇಳುತ್ತಾರೆ.

ವಾದಿ ನಿಂಗಮ್ಮನವರು MR H21/2013/2014 ಆಧಾರದೆ ಮೇಲೆ 2 ಎಕದರೆ 17 ಗುಂಟೆ ಜಮೀನಿನ ಖಾತೆ ಪಹಣಿಯನ್ನು ಅವರ ಹೆಸರಿಗೆ ಬದಲಾವಣೆ ಮಾಡಿಸಿ ಸದರಿ ಜಮೀನಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯು 2 ಎಕರೆ 12 ಗುಂಟೆ ಜಮೀನನ್ನು ಮಾತ್ರ ಅವರ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿದ್ದಾರೆಂದು ಹೇಳುತ್ತಾರೆ. ಕಾಳಮ್ಮನವರಿಂದ ಸಿದ್ದಲಿಂಗಯ್ಯನವರಿಗೆ ಕ್ರಯದ ದಾಖಲೆಯ ಮೇಲೆ ಕೇವಲ 9 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲೆಯ ಆಧಾರದ ಮೇಲೆ 12 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದೇವೆ ಎಂದು ಹೇಳುತ್ತಾರೆ. ಕರಾಬು ಜಮೀನಿನಲ್ಲಿ ವಾದಿಯ ಹೆಸರಿಗೆ 13 ಗುಂಟೆ ಜಮೀನನ್ನು RRT NO.(dis)Cr 26/2014-15 ರಲ್ಲಿ ಬದಲಾವಣೆಯಾಗಿದೆ ಎಂದರೆ ಸದರಿ ಆದೇಶವು ನಾನು ಎ.ಸಿ ರವರ ಮುಂದೆ ಪ್ರಶ್ನಿಸಿದ್ದೇನೆ. ಸದರಿ 2 ಎಕರೆ 17 ಗುಂಟೆ ಜಮೀನಿನ ಪೂರ್ವಕ್ಕೆ ಲಕ್ಷ್ಮಿದೇವಮ್ಮನವರ ಜಮೀನು, ಪಶ್ಚಿಮಕ್ಕೆ ನಿಂಗಪ್ಪನವರ ಜಮೀನು, ಉತ್ತರಕ್ಕೆ ಲೆಂಕಪ್ಪನವರ ಜಮೀನು, ದಕ್ಷಿಣಕ್ಕೆ ಸರ್ಕಾರಿ ರಸ್ತೆ ಎಂದರೆ ಸರಿಯಲ್ಲ. ಕರಾಬು 13 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಸಿದ್ದಲಿಂಗಯ್ಯನವರ ಜಮೀನು, ಪಶ್ಚಿಮಕ್ಕೆ ತಿರುಮಲ ಗಿರಯ್ಯನವರ ಮಗ ದಾಸಪ್ಪನವರ ಜಮೀನು, ಉತ್ತರಕ್ಕೆ ಕರಾಬು ಹಳ್ಳ, ದಕ್ಷಿಣಕ್ಕೆ ಚೆಲುವಯ್ಯನವರ ಜಮೀನು ಎಂದರೆ ಸುಳ್ಳು. ಪ್ರತಿವಾದಿಗಳು ದಾನ ಪತ್ರದ ಆಧಾರದ ಮೇಲೆ 2 ಎಕರೆ 24 ಗುಂಟೆ ಜಮೀನಿನ ಕಾಳಮ್ಮನವರಿಂದ ಕ್ರಯಕ್ಕೆ ಪಡೆದ 7 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದರು ಸಹ ನಾವು ವಾದಿಯರ ದಾವಾ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಎಂದರೆ ಸರ್ವೆ ನಂ.37 ರ ಪಹಣಿಗಳು ಒಟ್ಟು ಕೂಡಿಸಿವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಜಮೀನುಗಳನ್ನು ಪೋಡಿಗಳಾಗಿದ್ದವು ಆದರೆ ಪ್ರತಿವಾದಿಯು ಅವುಗಳನ್ನು ರದ್ದು ಮಾಡಿಸಿದ್ದಾರೆ ಎಂದು ಹೇಳುತ್ತಾರೆ. ಸದರಿ ಪೋಡಿಯು ಯಾವ ಕಾರಣಕ್ಕೆ ರದ್ದಾಗಿವೆ ಎಂದು ತೋರಿಸಲು ನಾನು

ನ್ಯಾಯಾಲಯದಲ್ಲಿ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನನ್ನ ಸ್ವಾಧೀನದ ಆಸ್ತಿಯನ್ನು ಬಿಟ್ಟು ಪೋಡಿ ಮಾಡಿಸಲು ನನಗೆ ಯಾವುದೇ ಅಭ್ಯಂತರ ಇಲ್ಲ. ನಾನು ಹೇಳಿದಂತೆ ಆಸ್ತಿಯ ಸ್ವಾಧೀನದಲ್ಲಿ ಇಲ್ಲದೆ ಇದ್ದರು ನಾವುಗಳು ವಾದಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯು ತಮ್ಮ ಸ್ವಾಧೀನದಲ್ಲಿ ಇರುವ ಜಮೀನನ್ನು ಪೋಡಿ ಮಾಡಿಸುವುದಕ್ಕು ನಾವುಗಳು ಬಿಡದೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

**<u>Re examination - Nil</u>**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi